ಮೊಣಕಾಲ ಬೇನೆಯಿಂದ ಮನೆಬಿಟ್ಟು ಚಟ್ ಅನ್ನುವುದಿಲ್ಲ. ಆತನೂ ಮೊದಲಿಗಿಂತ ಈಗ ಸೊರಗಿದ್ದಾನೆ. ತಾನು ಲಗ್ನವಾಗುವುದೇ ಬೇಸಿ ಅಂದುಕೊಂಡ.

'ಆಯ್ತುವಾ, ಕನ್ಯೆ ನೋಡ್ರೀ ಹಂಗಾರ. ನನಗೂ ಕೋರಿಯರ್ ಪಗಾರ ಕಡಿಮೆ ಐತಿ. ನಾನು ಮದಿವಿ ಆದ್ರ ನಾಕು ಮಂದಿ ಅಕ್ಕೀವಿ. ಇಷ್ಟಾ ಪಗಾರದಾಗ ಹೆಂಗಾರ ಮಾಡಿ ಸಂಸಾರ ನೀಗಿಸಿದ್ರಾತು. ನಿಮಗೂ ವಯಸ್ಸಾತು. ಸೊಸಿ ಬಂದ್ರ ನಿನಗೂ ಆಸರ ಅಕ್ಕಾಳ. ನಾನೂ ಹುಬ್ಬಳ್ಳಿ ಬಿಟ್ಟು ಇಲ್ಲೇ ನವಲಗುಂದದಾಗ ಕೋರಿಯರ್ ಏಜೆನ್ಸಿ ತಗೊಂಡು ಕೆಲ್ಸ ಮಾಡ್ತಿನಿ...' ಅಂದ.

